# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 34 (52) |
| ಸದಸ್ಯರ ಹೆಸರು | : | ಶ್ರೀ ಎಂ. ಎ. ಗೋಪಾಲಸ್ವಾಮಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.12.2021 |
| ಉತ್ತರಿಸುವವರು | : | ಅರಣ್ಯ, ಆಹಾರ, ನಾಗರಿಕ ಸರಬರಾಜು<br>ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯದಂಚಿನ ಹೊಲಗದ್ದೆಗಳಲ್ಲಿ ಬೆಳೆದ ಬೆಳೆಗಳನ್ನು, ಕಾಡುಪ್ರಾಣಿಗಳನ್ನು ನಾಶ ಮಾಡುತ್ತಿರುವುದರಿಂದ ರೈತರಿಗೆ ಆಗುತ್ತಿರುವ ನಷ್ಟಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಶಾಶ್ವತ ಪರಿಹಾರವನ್ನು ಕಂಡು ಹಿಡಿಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು) | ಬಂದಿದೆ.<br><br>ವನ್ಯಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1. ಕಾಡಾನೆಗಳನ್ನು ನಿಯಂತ್ರಿಸಲು ಕ್ಷಿಪ್ರ ಕಾರ್ಯ ಪಡೆ ತಂಡಗಳನ್ನು ರಚಿಸಿ, ಕಾಡಾನೆಗಳು ನಾಡಿಗೆ ಬಾರದಂತೆ ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.<br>2. ಆನೆ ನಿರೋಧಕ ಕಂದಕನಿರ್ಮಾಣ.<br>3. 50% ಸಹಾಯಧನ (ಸಬ್ಸಿಡಿ) ಆಧಾರಿತ ಸೋಲಾರ್ ತಂತಿಬೇಲಿ ನಿರ್ಮಾಣ ಹಾಗೂ ನಿರ್ವಹಣೆ.<br>4. ಉಪದ್ರವಕಾರಿ ಪುಂಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸುವ ಕಾರ್ಯ<br>5. ಪಟಾಕಿ ಖರೀದಿಸಿ ರೈತರಿಗೆ ಹಂಚಿಕೆ ಮಾಡಿರುವುದು.<br>6. ಅರಣ್ಯದೊಳಗೆ ಅಟ್ಟಣಿಗೆಗಳ ನಿರ್ಮಾಣ.<br>7. ವೀಕ್ಷಣಾ ಗೋಪುರಗಳ ನಿರ್ಮಾಣ.<br>8. ವೀಕ್ಷಣಾ ರೇಖೆಗಳನಿರ್ವಹಣೆ<br>9. ಮಾನವ -ವನ್ಯಪ್ರಾಣಿಗಳ ಸಂಘರ್ಷ ನಿಯಂತ್ರಣದ ಬಗ್ಗೆ, ರೈತರಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. |

......2

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ಎಷ್ಟು ಎಕರೆ ಬೆಳೆ ಹಾನಿಯಾಗಿದೆ; ಯಾವ ಯಾವ ಬೆಳೆಗಳು ಹಾನಿಯಾಗಿವೆ; ಸದರಿ ಹಾನಿಗಳಿಗೆ ಸರ್ಕಾರದಿಂದ ವಿತರಿಸಲಾದ ಪರಿಹಾರವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ವನ್ಯಪ್ರಾಣಿಗಳ ಹಾವಳಿಯಿಂದ ಆಲೂರು, ಸಕಲೇಶಪುರ, ಯಸಳೂರು ಮತ್ತು ಬೇಲೂರು ತಾಲ್ಲೂಕು / ವಲಯಗಳಲ್ಲಿ ಕಾಫಿ, ಕಾಳುಮೆಣಸು, ಏಲಕ್ಕಿ, ಬಾಳೆ, ಬತ್ತ ಹಾಗೂ ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಅರಕಲಗೂಡು ತಾಲ್ಲೂಕು / ವಲಯಗಳಲ್ಲಿ ಮೆಕ್ಕಜೋಳ, ರಾಗಿ, ಆಲೂಗಡ್ಡೆ ಮುಂತಾದ ತರಕಾರಿ ಬೆಳೆಗಳು ಹಾನಿಯಾಗುತ್ತಿರುವುದು ವರದಿಯಾಗಿರುತ್ತದೆ.<br><br>ಮುಂದುವರೆದು, ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯುಎಲ್ 2016, ಬೆಂಗಳೂರು, ದಿನಾಂಕ 19.09.2016 ರಂತೆ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆಹಾನಿ ಪ್ರಕರಣಗಳಲ್ಲಿ ಎಕ್ಸ್‌ಗ್ರೇಷಿಯಾ ಮೊತ್ತವನ್ನು ಸಂಖ್ಯೆ / ಕೆಜಿ ಲೆಕ್ಕದಲ್ಲಿ ಮೌಲ್ಯಮಾಪನ ಮಾಡಿ ನಿಗದಿಪಡಿಸಿದ ಪರಿಹಾರದ ಮೊತ್ತವನ್ನು ಪಾವತಿಸಲಾಗುತ್ತಿರುವುದರಿಂದ ಹೆಕ್ಟೇರು / ಎಕರೆ ಪ್ರಮಾಣದ ಹಾನಿಯ ವಿವರ ದಾಖಲಿಸಲಾಗುತ್ತಿರುವುದಿಲ್ಲ.<br><br>ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಪಾವತಿಸಲಾದ ದಯಾತ್ಮಕ ಧನದ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಇ) | ಹಾಸನ ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ರೂಪಿಸಿರುವ ಯೋಜನೆಗಳ ಯಾವುವು; ಇದಕ್ಕಾಗಿ ಸರ್ಕಾರ ಖರ್ಚು ಮಾಡಿರುವ ಅನುದಾನವೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು) | ಹಾಸನ ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು 2021-22ನೇ ಸಾಲಿನಲ್ಲಿ ರೂಪಿಸಿರುವ ಯೋಜನೆಗಳು ಹಾಗೂ ತಾಲ್ಲೂಕುವಾರು ಖರ್ಚು ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ. | ಯೋಜನೆ | ತಾಲ್ಲೂಕು | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|
| 1) | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ | ಆಲೂರು | 6,64,300 |
| | | ಬೇಲೂರು | 85,000 |
| | | ಸಕಲೇಶಪುರ | 20,91,620 |
| | | ಅರಕಲಗೂಡು | 1,53,900 |
| | | ಹೊಳೆನರಸಿಪುರ | 2,35,000 |
| | | ಅರಸೀಕೆರೆ | 3,69,500 |
| | | ಚನ್ನರಾಯಪಟ್ಟಣ | 3,88,479 |
| | | ಒಟ್ಟು[A] | 39,87,799 |
| 2) | Contract/ Outsource | ಆಲೂರು | 31,03,475 |
| | | ಬೇಲೂರು | 3,17,832 |
| | | ಸಕಲೇಶಪುರ | 98,99,110 |
| | | ಒಟ್ಟು[B] | 1,33,20,417 |
| 3) | ಆನೆಯೋಜನೆ-- Contract/ Outsource | ಬೇಲೂರು | 1,05,948 |
| | | ಸಕಲೇಶಪುರ | 5,09,247 |
| | | ಒಟ್ಟು[C] | 6,15,195 |
| 4) | ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ- ಸೌರತಂತಿ ಬೇಲಿ ನಿರ್ಮಾಣ | ಆಲೂರು [D] | 1,45,000 |
| 5) | ಉಪಯೋಗಿತ ರೈಲ್ವೆಹಳಿಗಳ ಬ್ಯಾರಿಕೇಡ್ ನಿರ್ಮಾಣ ದಿಂದ ಮಾನವ-ಹತ್ಯೆ ಪ್ರಾಣಿ ಸಂಘರ್ಷ ನಿಯಂತ್ರಣ- | ಆಲೂರು [E] | 1,10,26,998 |
| | | ಒಟ್ಟುಮೊತ್ತ[A+B+C+D+E] | 2,90,95,409 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಈ ಮೇಲ್ಕಂಡ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.<br>1. ಹಾಸನ ವಿಭಾಗ ವ್ಯಾಪ್ತಿಯಲ್ಲಿ ಬರುವ ಸಕಲೇಶಪುರ, ಆಲೂರು, ಅರಕಲಗೂಡು, ಬೇಲೂರು & ಯಸಳೂರು ವಲಯಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಸದರಿ ಕಾಡಾನೆಗಳನ್ನು ನಿಯಂತ್ರಿಸಲು ತಲಾ ನಾಲ್ಕು (4) ಜನರ ತಂಡದಂತೆ 21 ಕಾಡಾನೆಗಳನ್ನು ಹಿಮ್ಮೆಟ್ಟಿಸುವ ತಂಡಗಳು, ಐದು (5) ಕ್ಷಿಪ್ರ ಕಾರ್ಯಪಡೆ ತಂಡಗಳನ್ನು ರಚಿಸಿ, ಕಾಡಾನೆಗಳು ನಾಡಿಗೆ ಬಾರದಂತೆ ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಕೈಗೊಳ್ಳಲಾಗುತ್ತಿದೆ.<br>2. ಆನೆ ನಿರೋಧಕ ಕಂದಕನಿ ರ್ಮಾಣ.<br>3. 50% ಸಹಾಯಧನ (subsidiary) ಆಧಾರಿತ ಸೋಲಾರ್ ತಂತಿ ಬೇಲಿ ನಿರ್ಮಾಣ.<br>4. ಉಪಯೋಗಿತ ರೈಲ್ವೆ ಹಳಿಗಳನ್ನು ಉಪಯೋಗಿಸಿ ರೈಲ್ವೆಬ್ಯಾರಿಕೇಡ್ ನಿರ್ಮಾಣ.<br>5. ಉಪದ್ರವ ಕಾರಿ ಪುಂಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸುವ ಕಾರ್ಯ.<br>6. ಪಟಾಕಿ ಖರೀದಿಸಿ ರೈತರಿಗೆ ಹಂಚಿಕೆ ಮಾಡಿರುವುದು.<br>7. ಅರಣ್ಯದೊಳಗೆ ಅಟ್ಟಣಿಗೆಗಳ ನಿರ್ಮಾಣ.<br>8. ವೀಕ್ಷಣಾ ಗೋಪುರಗಳ ನಿರ್ಮಾಣ.<br>9. ವೀಕ್ಷಣಾ ರೇಖೆಗಳ ನಿರ್ವಹಣೆ<br><br>ಮಾನವ-ವನ್ಯಪ್ರಾಣಿಗಳ ಸಂಘರ್ಷ ನಿಯಂತ್ರಣದ ಬಗ್ಗೆ, ರೈತರಿಗೆ, ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ, ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. |

ಸಂಖ್ಯೆ: ಅಪಜೀ 219 ಎಫ್‌ಡಬ್ಲ್ಯೂಎಲ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ

| ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ 52 | | | | | | | | |
|---|---|---|---|---|---|---|---|---|
| ವಿಷಯ : ಅರಣ್ಯದಂಚಿನ ಹೊಲಗದ್ದೆಗಳಿಗೆ ಕಾಡುಪ್ರಾಣಿಗಳ ಹಾವಳಿ ಬಗ್ಗೆ (ರೂ.ಗಳಲ್ಲಿ) | | | | | | | | |
| ಕ್ರ.ಸಂ | ಜಿಲ್ಲೆ | ತಾಲ್ಲೂಕು ವಿವರ | 2018-19 | | 2019-20 | | 2020-21 | |
| | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | 2 | 3 | 7 | 8 | 10 | 11 | 10 | 11 |
| 1 | ಹಾಸನ | ಆಲೂರು | 440 | 30,26,330 | 340 | 21,61,940 | 933 | 74,84,348 |
| 2 | | ಸಕಲೇಶಪುರ | 484 | 32,54,095 | 597 | 41,12,427 | 1,227 | 94,60,446 |
| 3 | | ಯಸಳೂರು | 463 | 28,91,640 | 939 | 54,70,052 | 743 | 43,11,077 |
| 4 | | ಬೇಲೂರು | 0 | 0 | 102 | 10,15,115 | 62 | 11,22,108 |
| 5 | | ಹಾಸನ | 59 | 3,05,460 | 83 | 8,67,244 | 112 | 5,76,439 |
| 6 | | ಅರಸೀಕೆರೆ | 47 | 2,88,710 | 11 | 86,460 | 68 | 3,41,983 |
| 7 | | ಚೆನ್ನರಾಯಪಟ್ಟಣ | 22 | 1,97,000 | 87 | 722500 | 83 | 5,58,168 |
| 8 | | ಹೊಳೆನರಸಿಪುರ | 58 | 2,48,800 | 22 | 99,800 | 115 | 5,56,030 |
| 9 | | ಅರಕಲಗೂಡು | 92 | 4,27,135 | 96 | 5,64,450 | 287 | 25,31,221 |
| | | **ಒಟ್ಟು** | **1,665** | **1,06,39,170** | **2,277** | **1,50,99,988** | **3,630** | **2,69,41,820** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು